PES IAMS
education for the real world

ಪಿಇಎಸ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್
(ಕುವೆಂಪು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟಿದೆ ಮತ್ತು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿದೆ)
ಎನ್ ಹೆಚ್ 206, ಸಾಗರ ರಸ್ತೆ, ಶಿವಮೊಗ್ಗ – 577 204 (ಕರ್ನಾಟಕ)

Phone : 8147053085

PES Institute of Advanced Management Studies
( Affiliated to Kuvempu University, Recognized by Govt. of Karnataka)

Website : pestrust.edu.in/pesiams

N H-206, Sagar Road, Shivamogga - 577 204 (Karnataka)

ದಿನಾಂಕ: 15–09–2019

**ಪತ್ರಿಕಾ ಪ್ರಕಟಣೆಗಾಗಿ**

## ಪಿಎಸ್‌ಐಎಎಂಎಸ್ ಕಾಲೇಜಿನಲ್ಲಿ CA ಮತ್ತು CS Foundation Course ಉದ್ಘಾಟನೆ

ಇಂದು ನಗರದ ಪಿಇಎಸ್‌ಐಎಎಂಎಸ್ ಕಾಲೇಜಿನಲ್ಲಿ **CA ಮತ್ತು CS Foundation Course** ಗಳನ್ನು ಉದ್ಘಾಟಿಸಲಾಯಿತು. Proedge Skill Development and Edutech Pvt. Ltd., Bengaluru ಇದರ ಸಹ ಸಂಸ್ಥಾಪಕರಾದ ಶ್ರೀ ಶ್ರೀರಾಮ್ ವಂಶಿಯವರು ಕೋರ್ಸ್‌ನ್ನು ಉದ್ಘಾಟಿಸುವುದರ ಮೂಲಕ ಅಧಿಕೃತ ಚಾಲನೆಯನ್ನು ನೀಡಿದರು. ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವಿಫಲತೆ ಸಾಮಾನ್ಯ. ಮೊದಲ ಪ್ರಯತ್ನದಲ್ಲಿ CA ಹಾಗೂ CS ನಂತಹ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದು ಸುಲಭವಲ್ಲ, ಅಂದಮಾತ್ರಕ್ಕೆ ಈ ಕುರಿತು ಹೆದರಿಕೆ ಮತ್ತು ಹಿಂಜರಿಕೆಗಳನ್ನು ಬೆಳೆಸಿಕೊಳ್ಳುವ ಅಗತ್ಯವಿಲ್ಲ. ಸೋಲಿಗೆ ಧೃತಿಗೆಡದೆ ಸೋಲನ್ನು ಗೆಲುವಿನ ಸೋಪಾನವಾಗಿ ಮಾಡಿಕೊಳ್ಳಬೇಕು ಎಂದರು. ಈ ಪರೀಕ್ಷೆಗಳ ಕುರಿತಾಗಿ ಯಾವುದೇ ರೀತಿಯ ಗೊಂದಲ ಹಾಗೂ ಅನುಮಾನಗಳಿದ್ದಲ್ಲಿ ನಮ್ಮ ತಜ್ಞ ತರಬೇತುದಾರರು ಅದನ್ನು ನಿವಾರಿಸುತ್ತಾರೆ. ಅಲ್ಲದೇ ಸೂಕ್ತ ಮಾರ್ಗದರ್ಶನವನ್ನು ನೀಡುತ್ತಾರೆ. ವಿದ್ಯಾರ್ಥಿಗಳು ವಿಷಯದ ಬಗ್ಗೆ ಯಾವುದೇ ಸಂದೇಹಗಳಿದ್ದಲ್ಲಿ ತರಬೇತುದಾರರನ್ನು ಒಳಗೊಂಡು ಗುಂಪು ಚರ್ಚೆಯ ಮೂಲಕ ಬಗೆಹರಿಸಿಕೊಳ್ಳುವುದರ ಜೊತೆಗೆ ಜ್ಞಾನವನ್ನು ವೃದ್ಧಿಸಿಕೊಳ್ಳಬಹುದು ಎಂದು ನುಡಿದರು. ವಿದ್ಯಾರ್ಥಿಗಳು ಪ್ರತಿ ದಿನ ಕನಿಷ್ಠ ಒಂದು ಗಂಟೆಗಳ ಕಾಲ ಅಧ್ಯಯನ ಮಾಡುವುದರೊಂದಿಗೆ ಗುಣ ಮಟ್ಟದ ಹಾಗೂ ಶಿಸ್ತುಬದ್ಧ ಅಧ್ಯಯನಕ್ಕೆ ಪ್ರಾಮುಖ್ಯತೆಯನ್ನು ನೀಡಬೇಕೆಂದು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪಿಇಎಸ್ ಟ್ರಸ್ಟ್‌ನ ಮುಖ್ಯ ಆಡಳಿತ ಸಂಯೋಜನಾಧಿಕಾರಿಗಳಾದ ಡಾ. ಆರ್. ನಾಗರಾಜರವರು ತಮ್ಮ ಸ್ವ ಅನುಭವವನ್ನು ಹಂಚಿಕೊಳ್ಳುತ್ತಾ ಯಶಸ್ಸು ಎಂಬುದು ಸದಾ ಸತತ ಪರಿಶ್ರಮದ ಮೂಲಕ ಲಭಿಸುತ್ತದೆ. ಹಾಗೆಯೇ ವಿದ್ಯಾರ್ಥಿಗಳು ಸ್ಫೂರ್ತಿಯನ್ನು ಕಳೆದುಕೊಳ್ಳದೆ, ನಿರಂತರ ಪ್ರಯತ್ನವನ್ನು ನಿಲ್ಲಿಸದೆ ತಮ್ಮ ಗುರಿಯನ್ನು ಸಾಧಿಸಬೇಕು ಎಂದು ಹೇಳಿದರು. ಮುಂದುವರೆದು ಮಾತನಾಡುತ್ತಾ ವಿದ್ಯಾರ್ಥಿಗಳು ಶಿಸ್ತುಬದ್ಧ ಅಧ್ಯಯನವನ್ನು ವರ್ಷದ ಉದ್ದಕ್ಕೂ ಅಳವಡಿಸಿಕೊಳ್ಳುವುದು ಬಹಳ ಮುಖ್ಯ. ಈ ತರಗತಿಗಳನ್ನು ವೈಜ್ಞಾನಿಕವಾಗಿ ರೂಪಿಸಲಾಗಿದ್ದು ಒಟ್ಟು 428 ಗಂಟೆಗಳ ಅವಧಿಯದಾಗಿರುತ್ತವೆ. ಇದರಲ್ಲಿ 300 ಗಂಟೆಗಳು ಚರ್ಚೆ ಹಾಗೂ 128 ತರಗತಿಗಳ ಮೌಲ್ಯಮಾಪನ ಮತ್ತು ಪುನರಾವರ್ತನೆಯನ್ನು ಒಳಗೊಂಡಿರುತ್ತವೆ ಎಂದು ನುಡಿದರು. **CA ಮತ್ತು CS Course** ಆಕಾಂಕ್ಷಿಗಳು ತಮ್ಮ ವಿಶ್ಲೇಷಣಾತ್ಮಕ ಕೌಶಲ್ಯವನ್ನು ವೃದ್ಧಿಸಿಕೊಳ್ಳುವುದರ ಜೊತೆಗೆ ಪ್ರತಿನಿತ್ಯ ಯೋಜನೆರಹಿತವಾಗಿ 16 ರಿಂದ 18 ಗಂಟೆ ಓದುವುದರ ಬದಲಾಗಿ ಯೋಜಿತವಾಗಿ ದಿನಕ್ಕೆ ಒಂದು ಗಂಟೆ ಅಭ್ಯಾಸದಲ್ಲಿ ತೊಡಗಿಕೊಳ್ಳುವುದು ಮುಖ್ಯ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ. ಸಾಯಿಲತ, ಬಿಬಿಎ ಮತ್ತು ಬಿ.ಕಾಂ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎಂ.ಸುದರ್ಶನ್ ಹಾಗೂ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು. ಕು. ಸ್ವಾತಿ .ಜೆ ಸ್ವಾಗತಿಸಿ, ಕು. ಶ್ವೇತ ಪ್ರಾರ್ಥಿಸಿ, ಕು. ರೂಪಶ್ರೀ ವಂದಿಸಿ, ಶ್ರೀಮತಿ ರಶ್ಮಿ . ಎ . ಆರ್ ನಿರೂಪಿಸಿದರು.

ಪ್ರಾಂಶುಪಾಲರು
ಪಿಇಎಸ್‌ಐಎಂಎಸ್

K. Sailatha
Principal
PES Institute of Advanced Management Studies
NH 206, Sagar Road
SHIVAMOGGA-577 204